ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| |
|---|
| ಹೇಳಿಕೆ ಹಾಳೆ |
| (ಆರ್.ಪಿ. ಸಂಖ್ಯೆ 57) |
| ನಮೂನೆ ಸಂಖ್ಯೆ 4 |
| (ಸಿವಿಲ್) |

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

<u>ಸಿ.ಸಿ. ನಂ.ಃ 1544/2022</u>

.........................................................................

CW 09
PW 04

| | | |
|---|---|---|
| ಹೆಸರು | ಃ | ದೇವೇಂದ್ರ ಲಕ್ಕನಗೌಡರ |
| ತಂದೆಯ ಹೆಸರು | ಃ | ಕಬೇರ |
| ವಯಸ್ಸು | ಃ | 52 ವರ್ಷ |
| ಉದ್ಯೋಗ | ಃ | ರೈತಾಪಿ ಕೆಲಸ |
| ವಾಸಸ್ಥಳ | ಃ | ತೇರಗಾಂವ. |

ದಿನಾಂಕ 09-02-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ನನಗೆ ಚಾಸಾ 3 ರವರು ಪರಿಚಯ ವಿದ್ದಾರೆ. ಉಳಿದವರ ಪರಿಚಯವಿಲ್ಲ. ಆರೋಪಿಯನ್ನು ಈ ಮೊದಲು ನೋಡಿಲ್ಲ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಅದು ಘಟನಾ ಜಾಗದ ಪಂಚನಾಮೆ ಆಗಿದ್ದು, ಅದರಲ್ಲಿನ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಘಟನಾ ಜಾಗದ ಪಂಚನಾಮೆಯನ್ನು ನಿಪಿ 6 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 6 ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಪೊಲೀಸ ಠಾಣೆಯಲ್ಲಿ ಸುಮಾರು 2 ವರ್ಷಗಳ ಹಿಂದೆ ಮಾಡಿರುತ್ತೇನೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ತಾವು ಇರುವುದಾಗಿ ನುಡಿಯುತ್ತಾರೆ. ಆದ್ದರಿಂದ ಸದರಿ ಭಾವಚಿತ್ರವನ್ನು **ನಿಪಿ 7 ಎಂದು** ಗುರುತಿಸಲಾಯಿತು. ಸದರಿ ಭಾವಚಿತ್ರವನ್ನು ಕೃಷಿ ಇಲಾಖೆಯ ಹತ್ತಿರ ಕರೆದುಕೊಂಡು ಹೋಗಿದ್ದರು, ನನಗೆ ಅಪಘಾತ ಆದ ಜಾಗ ಇದೆ ಎಂದು ತೋರಿಸಲು ಪಿ ಎಸ್ ಐ ರವರು ಹೇಳಿದರು, ಹಾಗಾಗಿ ನಾನು ತೋರಿಸಿದ್ದೇನೆ ಎನ್ನುತ್ತಾರೆ. ಘಟನೆಯ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ.

ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದು ಘಟನಾ ಜಾಗದ ಕಚ್ಚಾ ನಕಾಶೆ ಆಗಿದ್ದು, ಅದರಲ್ಲಿನ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಘಟನಾ ಜಾಗದ ಕಚ್ಚಾ ನಕಾಶೆಯನ್ನು **ನಿಪಿ 8 ಎಂದು** ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ 8 ಎ ಎಂದು** ಗುರುತಿಸಲಾಯಿತು.

ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ ಅದು ಮೋಟಾರ ಸೈಕಲ್ ಪರಿಶೀಲನಾ ಪಂಚನಾಮೆ ಆಗಿದ್ದು, ಅದರಲ್ಲಿನ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಮೋಟಾರ ಸೈಕಲ್ ಪರಿಶೀಲನಾ ಪಂಚನಾಮೆಯನ್ನು **ನಿಪಿ 9 ಎಂದು** ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು **ನಿಪಿ 9 ಎ ಎಂದು** ಗುರುತಿಸಲಾಯಿತು. ಆ ದಿನ ನನ್ನ ಗೆಳೆಯನಾದ ಚಾಸಾ 3 ರವರು ವಾಹನ ಬಿಡಿಸಿಕೊಂಡರು ಆಗ ನನ್ನ ಸಹಿ ಪಡೆದಿರುತ್ತಾರೆ. ಸಾಕ್ಷಿಗೆ ಒಂದು ಭಾವಚಿತ್ರವನ್ನು ತೋರಿಸಲಾಗಿ ಅದರಲ್ಲಿ ತಾವು ಇರುವುದಾಗಿ ನುಡಿಯುತ್ತಾರೆ. ಸದರಿ ಭಾವಚಿತ್ರವನ್ನು ಈಗಾಗಲೇ **ನಿಪಿ 2 ಎಂದು** ಗುರುತಿಸಲಾಗಿದೆ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 07-11-2020 ರಂದು ಪೊಲೀಸರಿಗೆ ಹೇಳಿಕೆ ನೀಡಿ ಅದರಲ್ಲಿ ದಿನಾಂಕ 06-11-2020 ರಂದು ಸಂಜೆ 06-00 ಗಂಟೆಗೆ ಚಾಸಾ 4 ರವರು --------------------- ವಿಠ್ಠಲ ದೂರನ್ನು ದಾಖಲಿಸಿರುತ್ತಾರೆ ಎಂದು ನುಡಿದಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿ ಅಲ್ಲಗಳೆದ ಮೇರೆಗೆ ಅವರ ಹೇಳಿಕೆಯನ್ನು ನಿಪಿ 4 ಎಂದು ಗುರುತಿಸಲಾಯಿತು.

ಆ ಸಮಯದಲ್ಲಿ ಆರೋಪಿ ಮು.ಮಾ. 1 ರಿಂದ ಚಾಸಾ 1 ರವರಿಗೆ ಹೊಡೆದಿದ್ದರು ಎಂದರೆ ಸಾಕ್ಷಿ ನಾನು ನೋಡಿಲ್ಲ ಎನ್ನುತ್ತಾರೆ. ಆರೋಪಿತನೆ ಚಾಸಾ 1 ರವರ ಎದೆಗೆ ಕಲ್ಲಿನಿಂದ ಹೊಡೆದನು ಎಂದರೆ ನಾನು ನೋಡಿಲ್ಲ ಎನ್ನುತ್ತಾರೆ. ಘಟನೆಯನ್ನು ಕಣ್ಣಾರೆ ನೋಡಿದ್ದರೂ ಸಹ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿಯ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.